ನಿರ್ದೇಶಕರು ಸಲ್ಲಿಸುವ ಪ್ರಸ್ತಾವನೆಯನ್ವಯ ಇಲಾಖಾ ವತಿಯಿಂದ ದಿನಾಂಕ: 18.07.2003 ರ ಸರ್ಕಾರದ ಆದೇಶ ಸಂಖ್ಯೆ: ಕೃತೋಇ/280/ಕೃಉಇ/2003 ರಲ್ಲಿ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಸಹಾಯ ನೀಡುವ ಉದ್ದೇಶದಿಂದ, ಆತ್ಮಹತ್ಯೆ ಮಾಡಿಕೊಂಡ ಪ್ರತಿ ರೈತರ ಕುಟುಂಬದ ಕಾನೂನುಬದ್ಧ ವಾರಸುದಾರರಿಗೆ ₹ 1.00 ಲಕ್ಷ ಪರಿಹಾರ ನೀಡಲಾಗುತ್ತಿದೆ.

ನುಸಿಪೀಡೆ ರೋಗದಿಂದ ಹಾಳಾದ ತೆಂಗು ಬೆಳೆಗಾರರಿಗೆ ಪರಿಹಾರ ನೀಡುವುದು

1785 (1888); ಶ್ರೀ ಬಾಲಕೃಷ್ಣ ಸಿ. ಎನ್.

ಅ) ರಾಜ್ಯದಲ್ಲಿ ತೆಂಗು ಬೆಳೆಯುವ ಜಿಲ್ಲೆಗಳು ಯಾವುವು;

ಆ) ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಪ್ರಮಾಣದ ತೆಂಗನ್ನು ಬೆಳೆಯಲಾಗುತ್ತಿದೆ; ಜಿಲ್ಲಾವಾರು ವಿವರ ನೀಡುವುದು;

ಇ) ರಾಜ್ಯದಲ್ಲಿ ರೈತರು ಬೆಳೆಯುವ ತೆಂಗಿನ ಬೆಳೆಗೆ ನುಸಿಪೀಡೆ ರೋಗದಿಂದ ಬೆಳೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ನುಸಿಪೀಡೆ ರೋಗದಿಂದ ಬೆಳೆ ನಷ್ಟವಾದ ತೆಂಗು ಬೆಳೆಗಾರರಿಗೆ ಸರ್ಕಾರ ರೈತರಿಗೆ ಪರಿಹಾರ ಧನವನ್ನೇನಾದರೂ ನೀಡಿದೆಯೇ;

ಉ) ಹಾಗಿದ್ದಲ್ಲಿ, ಇದುವರೆವಿಗೂ ಪ್ರತಿ ಎಕರೆಗೆ, ಎಷ್ಟು ರೈತರಿಗೆ ಮತ್ತು ಎಷ್ಟು ಪ್ರಮಾಣದ ಪರಿಹಾರ ಧನವನ್ನು ನೀಡಲಾಗಿದೆ? ಜಿಲ್ಲಾವಾರು ವಿವರಗಳನ್ನು ನೀಡುವುದು?

ಡಾ॥ ಶಾಮನೂರು ಶಿವಶಂಕರಪ್ಪ (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) ರಾಜ್ಯದಲ್ಲಿ ತೆಂಗು ಬೆಳೆಯನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಬೆಳೆಯಲಾಗುತ್ತಿದ್ದು, ಪ್ರಮುಖವಾಗಿ ತುಮಕೂರು, ಹಾಸನ, ಚಿತ್ರದುರ್ಗ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಚಾಮರಾಜನಗರ, ರಾಮನಗರ, ಉತ್ತರಕನ್ನಡ, ದಾವಣಗೆರೆ, ಶಿವಮೊಗ್ಗ, ಇತ್ಯಾದಿ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ.

ಆ) ರಾಜ್ಯದಲ್ಲಿ 2012–13 ನೇ ಸಾಲಿನಲ್ಲಿ ತೆಂಗು ಬೆಳೆಯನ್ನು ಒಟ್ಟು 4.97 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು, ಅಂದಾಜು 48483 ಲಕ್ಷ ಕಾಯಿಗಳ ಉತ್ಪಾದನೆಯಿದ್ದು, ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ಜಿಲ್ಲೆಗಳು	ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)	ಉತ್ಪನ್ನ (ಲಕ್ಷ ಕಾಯಿಗಳು)
1	ಬೆಂಗಳೂರು (ನ)	2251	267
2	ಬೆಂಗಳೂರು (ಗ್ರಾ)	2899	279
3	ಚಿಕ್ಕಬಳ್ಳಾಪುರ	3024	342
4	ಚಿತ್ರದುರ್ಗ	57554	2879
5	ದಾವಣಗೆರೆ	12674	1753
6	ಕೋಲಾರ	6796	736
7	ರಾಮನಗರ	23500	2494
8	ಶಿವಮೊಗ್ಗ	6980	768
9	ತುಮಕೂರು	147539	13678
10	ಬಾಗಲಕೋಟೆ	1308	161
11	ಬೆಳಗಾವಿ	3602	424
12	ವಿಜಯಪುರ	284	31
13	ಧಾರವಾಡ	516	67

14	ಗದಗ	1645	279
15	ಹಾವೇರಿ	3488	3337
16	ಉತ್ತರ ಕನ್ನಡ	7754	1350
17	ಬಳ್ಳಾರಿ	1980	533
18	ಬೀದರ್	107	9
19	ಕಲಬುರಗಿ	257	689
20	ಕೊಪ್ಪಳ	1000	165
21	ರಾಯಚೂರು	445	63
22	ಯಾದಗಿರಿ	245	29
23	ಚಾಮರಾಜನಗರ	9560	717
24	ಚಿಕ್ಕಮಗಳೂರು	34100	2435
25	ದಕ್ಷಿಣ ಕನ್ನಡ	17107	1166
26	ಹಾಸನ	63056	3760
27	ಕೊಡಗು	1602	176
28	ಮಂಡ್ಯ	43025	5110
29	ಮೈಸೂರು	25514	2451
30	ಉಡುಪಿ	17587	2335
ಒಟ್ಟು		**497399**	**48483**

ಇ) ಬಂದಿದೆ, ಇತ್ತೀಚಿನ ಸಾಲುಗಳಲ್ಲಿ ನುಸಿಪೀಡೆಯ ಬಾಧೆಯು ನಿಯಂತ್ರಣದಲ್ಲಿದ್ದು ಶೇಕಡ 5 ರಿಂದ 10% ರಷ್ಟು ತೆಂಗು ಪ್ರದೇಶದಲ್ಲಿ ಕಂಡುಬಂದಿರುತ್ತದೆ.

ಈ) ಮತ್ತು ಉ) ಪರಿಹಾರ ಧನವನ್ನು ನೀಡಲಾಗಿರುವುದಿಲ್ಲ.